ಈ) ಗ್ರಾಹಕರು ವ್ಯಕ್ತಪಡಿಸಿದ ಕಳವಳಕ್ಕೆ ಉತ್ತರವಾಗಿ ಸಂಸ್ಥೆಯು ವಿಶೇಷವಾಗಿ ಎನ್.ಪಿ.ಸಿ.ಐ.ಎಲ್., ಕೆ.ಪಿ.ಟಿ.ಸಿ.ಎಲ್. ಮತ್ತು ಡಿ.ವಿ.ಬಿ. ಸಂಸ್ಥೆಗಳಿಗೆ ಅಗಿಂದಾಗ್ಗೆ ಎನ್‌ಜಿಇಎಫ್ ಬೆಳವಣಿಗೆಗಳು ಸರ್ಕಾರದ ನಿರ್ಧಾರಗಳು ಬಿ.ಐ.ಎಫ್.ಆರ್. ಹಾಗೂ ಅದರ ಆದೇಶಗಳ ಬಗ್ಗೆ ಮೇಲೆ ಹೇಳಿದ ಸಂಸ್ಥೆಗಳ ಗಮನ ಸೆಳೆಯಲಾಗಿದೆ. ಈ ಮಾಹಿತಿಯ ಆಧಾರ ಹಾಗೂ ಸ್ವಯಂ ಅರಿವಿನ ಮೇರೆಗೆ ಎನ್.ಪಿ.ಸಿ.ಐ.ಎಲ್ ತನ್ನ ಆದೇಶಗಳನ್ನು ಅವಧಿಗೆ ಮೊದಲು ಪೈಸಲುಗೊಳಿಸಿತು. ಕೆಪಿಟಿಸಿಎಲ್ ತನ್ನ ಆದೇಶಗಳನ್ನು ಬೇರೆ ಕಡೆ ನೀಡಿತು. ಡಿ.ವಿ.ಬಿ. ಗ್ರಾಹಕರು ತನ್ನ ಆದೇಶಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿತು.

ಉ) ಸ್ವಯಂ ನಿವೃತ್ತಿಯನ್ನು ಸಂಸ್ಥೆಯು ಕೆಎಸ್‌ಬಿಪಿಇ ಮಾರ್ಗದರ್ಶನದ ಪ್ರಕಾರ ಎರಡು ಬಾರಿ ಅಂದರೆ ಒಮ್ಮೆ ದಿ: 19.4.2002ರ ಬಿಐಎಫ್‌ಆರ್ ವಿಚಾರಣೆಗೆ ಮೊದಲು, ಮತ್ತೊಮ್ಮೆ ಸಂಸ್ಥೆಯನ್ನು ಮುಚ್ಚುವುದಕ್ಕೆ ಕಾರಣ ಕೇಳಿ ತಿಳುವಳಿಕೆ ಪತ್ರ ನೀಡುವುದಾಗಿ ಬಿಐಎಫ್‌ಆರ್ ತನ್ನ ವಿಚಾರಣೆಯಲ್ಲಿ ನಿರ್ಣಯ ಕೈಗೊಂಡ ದಿ: 19.4.2002ರ ನಂತರ ಹೀಗೆ ಎರಡು ಬಾರಿ ಸ್ವಯಂನಿವೃತ್ತಿ ಯೋಜನೆಯನ್ನು ಪ್ರಕಟಿಸಿತು.

ದಿ: 19.4.2002ಕ್ಕೆ ಮೊದಲು, ಸರಿಸುಮಾರು 938 ಉದ್ಯೋಗಿಗಳು ಸ್ವಯಂನಿವೃತ್ತಿಯನ್ನು ಆಯ್ಕೆ ಮಾಡಿ ಕೊಂಡಿದ್ದು, ಅವರುಗಳನ್ನು ಸ್ವಯಂನಿವೃತ್ತಿ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ದಿ: 19.4.2002ರ ನಂತರ ಅಂದರೆ ಬಿಐಎಫ್‌ಆರ್‌ನ ವಿಚಾರಣೆಯ ನಂತರ 1067 ಉದ್ಯೋಗಿಗಳು ಸ್ವಯಂ ವೃತ್ತಿಯನ್ನು ಆಯ್ಕೆ ಮಾಡಿ ಕೊಂಡರು ಅವರುಗಳನ್ನೂ ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಪ್ರಸ್ತುತದಲ್ಲಿ 909 ಉದ್ಯೋಗಿಗಳಿದ್ದು, ಅವರಲ್ಲಿ 709 ಉದ್ ್ಯೋಗಿಗಳು ಈಗಾಗಲೇ ಸ್ವಯಂನಿವೃತ್ತಿ ಯೋಜನೆಗೆ ತಮ್ಮ ಅರ್ಜಿಗಳನ್ನು ಸಲ್ಲಿಸಿದ್ದಾರೆ ಮತ್ತು ಸರ್ಕಾರದಿಂದ ಹಣ ಬಿಡುಗಡೆಯಾದ ಕೂಡಲೇ ಅವರುಗಳನ್ನು ಬಿಡುಗಡೆ ಮಾಡಲಾಗುವುದು. ನಿಯೋಜನೆಯಲ್ಲಿರುವ 64 ಉದ್ಯೋಗಿಗಳೂ ಸೇರಿದಂತೆ ಉಳಿದ 200 ಮಂದಿ ಉದ್ಯೋಗಿಗಳು ಸ್ವಯಂನಿವೃತ್ತಿ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಸ್ವಯಂನಿವೃತ್ತಿ ಯೋಜನೆಗಾಗಿ ಈವರೆಗೆ 95 ಕೋಟಿ ರೂ.ಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ ಮತ್ತು ಇಳಿದ ಉದ್ಯೋಗಿಗಳಿಗೆ ಸ್ವಯಂನಿವೃತ್ತಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲು, ರೂ. 50 ಕೋಟಿಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇದಾಗ್ಯೂ, ಎನ್‌ಎಫ್, ಪಿಇಡಿ: ಪಿಎಸ್‌ಡಿ ಮತ್ತು ಎಸ್‌ಇಡಿ ವಿಭಾಗಗಳನ್ನು ಮುಚ್ಚಲು ಕಾರ್ಮಿಕ ಕಾರ್ಯದರ್ಶಿಯವರು ಒಪ್ಪಿಗೆ ನೀಡಿದ್ದು ಮತ್ತು ಕಾರ್ಮಿಕ ಆಯುಕ್ತರು 301 ಉದ್ಯೋಗಿಗಳನ್ನು ರಿಟ್ರೆಂಚ್ ಮಾಡಲು ಆದೇಶವನ್ನು ಹೊರಡಿಸಿದ್ದಾರೆ. ಈವರೆವಿಗೂ ಯಾವೊಬ್ಬ ಉದ್ಯೋಗಿಯನ್ನೂ ಸಂಸ್ಥೆಯು ರಿಟ್ರೆಂಟ್ ಮಾಡಿಲ್ಲ.

ಮಂಗಳೂರು ಗೊಬ್ಬರ ಕಾರ್ಖಾನೆ

602(1120) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗಾಮೀಣ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಗೊಬ್ಬರ ಕಾರ್ಖಾನೆ (ಎಂ.ಸಿ.ಎಫ್)ಯಲ್ಲಿ ಸಾರ್ವಜನಿಕರ, ಸಹಕಾರಿ ಸಂಘಗಳ, ಖಾಸಗಿಯವರ ಹಾಗೂ ಸರ್ಕಾರದ ಶೇರು ಹಣದ ಮೊತ್ತವೆಷ್ಟು;

ಆ) ಹಣ ಕಟ್ಟಿರುವ ಸಹಾಕರ ಸಂಘಗಳು ಈ ಕಾರ್ಖಾನೆಯ ಸದಸ್ಯರಾಗಿದ್ದಾರೆಯೇ;

ಇ) ಈ ಕಾರ್ಖಾನೆ ಕಳೆದ ಮೂರು ವರ್ಷದಲ್ಲಿ ಉತ್ಪಾದಿಸಿದ ವಿವಿಧ ಗೊಬ್ಬರಗಳ ವಿವರವೇನು, ಈ ಕಾರ್ಖಾನೆ ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭವೆಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಮಂಗಳೂರು ಗೊಬ್ಬರ ಕಾರ್ಖಾನೆಯ ಶೇರು ಹಣದ ವಿವರಗಳು ಕೆಳಕಂಡಂತಿದೆ.

1.	ಸಾರ್ವಜನಿಕರು	ಶೇ. 25.01
2.	ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳು	ಶೇ. 0.31
3.	ಖಾಸಗಿಯವರು	ಶೇ. 30.44
4.	ಸರ್ಕಾರದ ಉದ್ದಿಮೆಗಳು (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್, ಕೆಎಸ್ಐಐಡಿಸಿ ಮತ್ತು ಕೆ.ಎಸ್.ಸಿ.ಎಂ.ಎಫ್)	ಶೇ. 5.70
5.	ಸಾರ್ವಜನಿಕ ಹಣಕಾಸು ಸಂಸ್ಥೆಗಳು	ಶೇ. 13.05
6.	ರಾಷ್ಟ್ರೀಕೃತ ಮತ್ತು ರಾಷ್ಟ್ರೀಕೃತವಲ್ಲದ ಬ್ಯಾಂಕುಗಳು	ಶೇ. 25.03
7.	ಅನಿವಾಸಿ ಭಾರತೀಯರು	ಶೇ. 0.28
8.	ಮ್ಯೂಚುಯಲ್ ಫಂಡ್ಸ್	ಶೇ. 0.18
	ಒಟ್ಟು	100.00

ಆ. ಹೌದು.

ಇ.

	1999-00	2000-01	2001-02
ಉತ್ಪಾದಿಸಿದ ವಿವಿಧ ಗೊಬ್ಬರಗಳ ವಿವರ (ಎಂ.ಟಿ.ಗಳಲ್ಲಿ)			
ಯೂರಿಯಾ	2,88,102	3,40,050	3,40,002
ಡೈಅಮೋನಿಯಂ ಫಾಸ್ಫೇಟ್	1,68,465	1,80,229	1,44,642
ಅಮೋನಿಯಂ	6,681	9,170	10,237

ಬೈಕಾರ್ಬೀನೇಟ್			
17:17:17	20,426	29,494	10,128
ಲಾಭ (ರೂ. ಕೋಟಿಗಳಲ್ಲಿ)			
(ತೆರಿಗೆಗೆ ಮುನ್ನ)			
	34.84	40.15	ತಪಾಸಣೆಯಲ್ಲಿದೆ.

ಸಮುದ್ರ ಕೊರತಕ್ಕೆ ತಡೆಗೊಡೆ ನಿರ್ಮಾಣದಲ್ಲಿ ಬಳಸುವ ಮರಳು ಚೀಲಗಳ ಮೌಲ್ಯ

603(991) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮುದ್ರ ಕೊರತಕ್ಕೆ ತಡೆಗೋಡೆ ನಿರ್ಮಿಸುವಾಗ ಬಳಸುವ ಒಂದು ಚದರ ಗಜ ಮರಳು ಚೀಲಕ್ಕೆ ನಿಗದಿಪಡಿಸಲಾಗಿರುವ ಹಣ ಎಷ್ಟು; ಇದರ ನಿರ್ವಹಣೆ ವೆಚ್ಚ ಎಷ್ಟು;

ಆ) ಇದೇ ಕಾರ್ಯಕ್ಕೆ ಒಂದು ಚದರ ಗಜ ಕಲ್ಲಿಗೆ ಎಷ್ಟು ಹಣವನ್ನು ಕೊಡಲಾಗುತ್ತಿದೆ. ಮರಳು ಹಾಗೂ ಕಲ್ಲಿನ ತಡೆಗೋಡೆ ನಿರ್ಮಾಣದಲ್ಲುಂಟಾಗುವ ವ್ಯತ್ಯಾಸಗಳೇನು; ಈ ಎರಡು ಪ್ರಕಾರಗಳಲ್ಲಿನ ಹಣದ ವ್ಯತ್ಯಾಸ ಎಷ್ಟು;

ಇ) ಬ್ರಹ್ಮಾವರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸಮುದ್ರ ಕೊರೆತ ಪ್ರದೇಶದಲ್ಲಿ ತಡೆಗೋಡೆ ನಿರ್ಮಿಸಲು ಮರಳು ಚೀಲ ಬಳಸುವ ತೀರ್ಮಾನ ಕೈಗೊಂಡ ಉದ್ದೇಶಗಳೇನು; ಇದರಿಂದ ಉಂಟಾದ ಲಾಭಗಳೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ) ಮರಳು ಚೀಲಗಳಿಗೆ ಘ.ಮೀ. ನಲ್ಲಿಯೇ ಲೆಕ್ಕ ಹಾಕಲಾಗುವುದು ಪ್ರತಿ ಘ.ಮೀ.ಗೆ ಅಂದಾಜು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ ರೂ. 702.00, ಉತ್ತರ ಕನ್ನಡ ಜಿಲ್ಲೆಗೆ ರೂ. 756.50 ಇರುತ್ತದೆ.

ಇದರ ನಿರ್ವಹಣೆಗಾಗಿ ಪ್ರತ್ಯೇಕ ವೆಚ್ಚ ಮಾಡುವುದಿಲ್ಲ.

ಆ) ಕಲ್ಲುಗಳಿಗೆ (ಆರ್ಮರ್ ಸ್ಟೋನ್) ಗಣಿಯಲ್ಲಿ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ ಪ್ರತಿ ಘ.ಮೀ.ಗೆ ರೂ. 530.0.00 ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಪ್ರತಿ ಘ.ಮೀ.ಗೆ ರೂ. 500.00 ದರ ಇರುತ್ತದೆ. ಇದರಲ್ಲಿ ಸಾಗಾಟ ಹೇರುವುದು ಇಳಿಸುವುದು ಇತ್ಯಾದಿ ದರ ಸೇರಿಲ್ಲ.

ಮರಳು ಚೀಲಗಳ ಹಾಗೂ ಕಲ್ಲಿನ ತಡೆಗೋಡೆಗಳ ಸೆಕ್ಷನ್‌ಗಳು ಭಿನ್ನವಾಗಿರುತ್ತದೆ. ಮರಳು ಚೀಲಗಳಿಗೆ ಎಲ್ಲಾ ಕಡೆ ಒಂದೇ ದರವಿರುತ್ತದೆ. ಕಲ್ಲುಗಳಿಗೆ ಸ್ಥಳದಿಂದ ಕಲ್ಲು ಗಣಿಗಳಿಗೆ ಇರುವ ದೂರದ ಮೇಲೆ ದರ ಅವಲಂಬಿತವಾಗಿರುತ್ತದೆ.